ಗುಲ್ಬರ್ಗಾ ನಗರದಲ್ಲಿ ಸರ್ದಾರ್ ವಲ್ಲಬಾಯಿ ಪಟೇಲ್ ಪ್ರತಿಮೆ ಸ್ಥಾಪನೆ

1079 (1425) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದಲ್ಲಿ ಸನ್ಮಾನ್ಯ ಸರ್ದಾರ್ ವಲ್ಲಬಾಯಿ ಪಟೇಲ್ ಪ್ರತಿಮೆಯನ್ನು ಸ್ಥಾಪಿಸುವಾಗ ಆ ಪ್ರತಿಮೆ ಮೇಲೆ 'ವಂದೇ ಮಾತರಂ' ಬರಹವನ್ನು ಹಾಕಬೇಕೆಂದು ತೀರ್ಮಾನಿಸಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಾದಲ್ಲಿ ಈ ರೀತಿ ಕೆತ್ತಿಸದೆ ಇರುವುದಕ್ಕೆ ಕಾರಣವೇನು? ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ?

ಇ) 'ವಂದೇ ಮಾತರಂ' ಬರಹವನ್ನು ಕೆತ್ತಿಸಿದವರ ಮೇಲೆ ಕ್ರಮ ಕೈಗೊಂಡಿರುವುದು ಸಾಧುವೇ ಇಂತಹವರ ಮೇಲೆ ಹಾಕಿಸಿರುವ ಮೊಕದ್ದಮೆ ಕೈಬಿಡುಗಡೆ ಪ್ರಸ್ತಾಪ ಸರ್ಕಾರದ ಮಂದಿದೆಯೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ತರಲಾಗಿತ್ತು

ಆ) ಸಾದುವಲ್ಲವೆಂದು ಪರಿಗಣಿಸಲಾಗಿತ್ತು

ಇ) ಯಾರ ವಿರುದ್ಧ ಕ್ರಮ ಕೈಗೊಳ್ಳದೆ ಇರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮಗಳು

1080 (1577) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಪ್ರೇಕ್ಷಣೀಯ ಸ್ಥಳಗಳನ್ನು ಪ್ರವಾಸಿ ಸ್ಥಳಗಳೆಂದು ಪ್ರವಾಸೋದ್ಯ ಇಲಾಖೆ ಗುರುತಿಸಿದೆ?

ಆ) ಬೆಂಗಳೂರಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಒಂದು ದಿನದ ಪ್ರವಾಸ ಕಾರ್ಯಕ್ರಮದಲ್ಲಿ ಯಾವ ಯಾವ ಪ್ರವಾಸಿ ಸ್ಥಳಗಳನ್ನು ಪ್ರವಾಸಿಗರಿಗೆ ತೋರಿಸಲಾಗುತ್ತಿದೆ?

ಇ) ರಾಮನಗರದ ಬಳಿ ಇರುವ ಜಾನಪದ ಲೋಕ, ಇಸ್ಕಾನ್ ಟೆಂಪಲ್, ರಾಗಿಗುಡ್ಡದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಬನ್ನೇರುಘಟ್ಟಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) 2000-2001ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಪ್ರವಾಸೋದ್ಯಮಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಗುರುತಿಸಲಾಗಿದೆ :-

1. ವಿಧಾನಸೌಧ
2. ಕಬ್ಬನ್ ಪಾರ್ಕ್
3. ಲಾಲ್‌ಬಾಗ್
4. ಮ್ಯೂಸಿಯಂ
5. ಟಿಪ್ಪು ಅರಮನೆ
6. ಬುಲ್ ಟೆಂಪಲ್
7. ಗವಿಗಂಗಾಧರೇಶ್ವರ ದೇವಸ್ಥಾನ
8. ಅಲಸೂರು ಕೆರೆ
9. ಇಸ್ಕಾನ್ ದೇವಸ್ಥಾನ
10. ಅಲಸೂರು ಸೋಮೇಶ್ವರ ದೇವಸ್ಥಾನ
11. ಸೆಂಟ್ ಮೇರಿ ಬಸಿಲಿಕ ಚರ್ಚ್
12. ಇನ್ ಫ್ಯಾಂಟ್ ಜೀಸಸ್ ಚರ್ಚ್
13. ತವಕ್ಕಲ್ ಮಸ್ತನ್ ದರ್ಗ
14. ರಾಜೀವ್ ಗಾಂಧಿ ಪ್ಲಾನಿಟೋರಿಯಂ
15. ಮ್ಯೂಸಿಕಲ್ ಫೌಂಟೈನ್

ಆ) ಬೆಂಗಳೂರು ನಗರದಲ್ಲಿರುವ ಈ ಕೆಳಕಂಡ ಪ್ರವಾಸಿ ಸ್ಥಳಗಳನ್ನು ಪ್ರವಾಸಿಗರಿಗೆ ತೋರಿಸಲಾಗುತ್ತಿದೆ (ಕೆ.ಎಸ್.ಟಿ.ಡಿ.ಸಿಯ 1 ದಿನದ ಪ್ರವಾಸದಲ್ಲಿ)

1. ಬುಲ್ ಟೆಂಪಲ್
2. ಟಿಪ್ಪು ಅರಮನೆ
3. ಲಾಲ್‌ಬಾಗ್
4. ಅಲಸೂರು ಕೆರೆ
5. ಮ್ಯೂಸಿಯಂ
6. ವಿಧಾನಸೌಧ
7. ಕಾವೇರಿ ಕರಕುಶಲ ಎಂಪೋರಿಯಂ
8. ಇಸ್ಕಾನ್ ಟೆಂಪಲ್
9. ಪ್ರಸನ್ನ ಅಂಜನೇಯ ದೇವಸ್ಥಾನ
10. ರಾಜರಾಜೇಶ್ವರಿ ದೇವಸ್ಥಾನ
11. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ
12. ರಾಜೀವ್‌ಗಾಂಧಿ ಪ್ಲಾನಿಟೋರಿಯಂ
13. ಸ್ಯಾಂಕಿ ಕೆರೆ
14. ಮ್ಯೂಸಿಕಲ್ ಫೌಂಟೈನ್

ಇ) 1. ಪ್ರವಾಸೋದ್ಯಮ ಇಲಾಖೆಯು ಜಾನಪದ ಲೋಕದಲ್ಲಿ ಆಚರಿಸುವ ಜಾನಪದ ಲೋಕೋತ್ಸವ ಮತ್ತು ಗಾಳಿಪಟ ಉತ್ಸವಕ್ಕೆ ಧನ ಸಹಾಯವನ್ನು ಒದಗಿಸುತ್ತದೆ. ಇದರಿಂದಾಗಿ ರಾಜ್ಯದ ಜಾನಪದ ಕಲೆಗೆ ಹೆಚ್ಚಿನ ಪ್ರಚಾರ ದೊರಕುವುದು.

2. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಕೆ.ಎಸ್.ಟಿ.ಡಿ.ಸಿ. ವತಿಯಿಂದ ಉಪಹಾರ ಗೃಹವನ್ನು ನಿರ್ವಹಿಸಲಾಗುತ್ತಿದೆ. ಹಾಗೂ ವನ್ಯಜೀವಿ ವೀಕ್ಷಣೆಯನ್ನು ಪ್ರವಾಸಿಗರಿಗೆ ಒದಗಿಸಲಾಗುತ್ತಿದೆ.

3. ಇಸ್ಕಾನ್ ಮತ್ತು ರಾಗಿಗುಡ್ಡ ಆಂಜನೇಯ ದೇವಸ್ಥಾನಗಳನ್ನು ಪ್ರವಾಸಿ ಸಂಸ್ಥೆಗಳು ನಿರ್ವಹಿಸಲಾಗುತ್ತಿದೆ ಇಲಾಖೆಯು ಬೆಂಗಳೂರು ನಗರದ ಬಗ್ಗೆ ಹೊರತರುತ್ತಿರುವ ವರ್ಣರಂಜಿತ ಪ್ರವಾಸಿ ಮಾಹಿತಿ ಪುಸ್ತಕದಲ್ಲಿ ಇಸ್ಕಾನ್ ದೇವಸ್ಥಾನದ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಈ) 2000-2001ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯು ಬೆಂಗಳೂರು ನಗರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ. 17.12 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ರಾಜ್ಯದಲ್ಲಿ ಪ್ರವಾಸಿ ಕೇಂದ್ರದಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು

1081 (1578) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2000-2001ನೇ ಸಾಲಿನಲ್ಲಿ ಇಲ್ಲಿಯವರೆಗೆ ಯಾವ ಯಾವ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಹಣ ಖರ್ಚು ಮಾಡಲಾಗಿದೆ?

ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯದಲ್ಲಿನ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಕೇಳಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ವಿವರವನ್ನು ಅನುಬಂಧ- 1ರ ಪಟ್ಟಿಯಲ್ಲಿ ಲಗತ್ತಿಸಲಾಗಿದೆ.

ಆ) 2000-2001ನೇ ಸಾಲಿನಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ರೂ. 44.35 ಕೋಟಿಗಳ 114 ಯೋಜನೆಗಳಿಗೆ ಬೇಡಿಕೆ ಸಲ್ಲಿಸಲಾಗಿತ್ತು. ಈ ಪೈಕಿ ಕೇಂದ್ರ ಸರ್ಕಾರವು 44 ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದ್ದು, ಇದಕ್ಕಾಗಿ ಅಂದಾಜು ರೂ. 575.00 ಲಕ್ಷಗಳನ್ನು ನಿಗಧಿಪಡಿಸಿದೆ.

ಅನುಬಂಧ - 1

ರೂ. ಲಕ್ಷಗಳಲ್ಲಿ

1	2	3
1.	ಶಿರಸಿಕೆರೆ ಹೊನ್ನಾವರ ರಸ್ತೆಯಲ್ಲಿ ಸಾರ್ವಜನಿಕ ಸೌಕರ್ಯ	2.40
2.	ಮುಲೆಕಾಮನಹಳ್ಳಿಯಲ್ಲಿ ಸಾರ್ವಜನಿಕ ಸೌಕರ್ಯ	8.86
3.	ಗುಲ್ಬರ್ಗಾದ ಗಾಣಗಾಪುರ ರಸ್ತೆಯಲ್ಲಿ ಸಾರ್ವಜನಿಕ ಸೌಕರ್ಯ	8.86
4.	ಬೆಳಗಾವಿಯ ಕಿಲ್ಲಾ ಕೋಟೆ ಕೆರೆ ಅಭಿವೃದ್ಧಿ	5.20